**ಕರ್ನಾಟಕ ಸರ್ಕಾರ**

ಸಂ: ಗ್ರಾಅಪ 86 ಜಿಪಕಾಯೋ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-06-2020

**ಸೇರ್ಪಡೆ**

**ವಿಷಯ:** ಕೋವಿಡ್-19 (ಕೊರೊನಾ ವೈರಸ್) ವ್ಯಾಪಕವಾಗಿ ಹರಡದಂತೆ ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಮಟ್ಟದ ಕಾರ್ಯಪಡೆ ರಚಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 86 ಜಿಪಕಾಯೋ 2019, ದಿನಾಂಕ:27-03-2020.
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಗ್ರಾಅಪ 86 ಜಿಪಕಾಯೋ 2019, ದಿನಾಂಕ:07-04-2020.
3. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ:ಗ್ರಾಅಪ 86 ಜಿಪಕಾಯೋ 2019, ದಿನಾಂಕ:27-04-2020ರ.
4. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ;ಗ್ರಾಅಪ 86 ಜಿಪಕಾಯೋ 2019, ದಿನಾಂಕ:20-05-2020.

*****

ಉಲ್ಲೇಖ(1)ರ ಸುತ್ತೋಲೆಯಲ್ಲಿ ಪ್ರಸಕ್ತ ಸನ್ನಿವೇಶಕ್ಕನುಗುಣವಾಗಿ ಹೊಸದಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆ ಹಾಗೂ ಗ್ರಾಮ ಮಟ್ಟದ ಕಾರ್ಯಪಡೆಗಳನ್ನು ರಚಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಗೆ ಉಲ್ಲೇಖ(2)ರ ಸೇರ್ಪಡೆ ಆದೇಶದಲ್ಲಿ ಕಾರ್ಯಪಡೆಯ ಜವಾಬ್ದಾರಿಗಳಲ್ಲಿ ಕ್ರಮ ಸಂಖ್ಯೆ 26 ಮತ್ತು 27ನ್ನು ಸೇರಿಸಲಾಗಿದೆ. ಸದರಿ ಕಾರ್ಯಪಡೆಗೆ ಉಲ್ಲೇಖ(3)ರ ಸೇರ್ಪಡೆ ಆದೇಶದಲ್ಲಿ ವಿಶೇಷಚೇತನರ ಬಗ್ಗೆ ಗಮನ ಹರಿಸಲು ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಪಡೆಯಲ್ಲಿ ಕ್ರಮ ಸಂಖ್ಯೆ 9(ಎ)ರಲ್ಲಿ ಗ್ರಾಮ ಮಟ್ಟದ ಪುನರ್ ವಸತಿ ಕಾರ್ಯಕರ್ತರನ್ನು ಸೇರ್ಪಡೆಗೊಳಿಸಿದೆ. ಉಲ್ಲೇಖ(4)ರಲ್ಲಿ ರೋಗನಿರೋಧಕ ಲಸಿಕಾ ಚುಚ್ಚುಮದ್ದು ಕಾರ್ಯಕ್ರಮವನ್ನು ಗ್ರಾಮ ಮಟ್ಟದ ಕಾರ್ಯಪಡೆಯ ಜವಾಬ್ದಾರಿಗಳಲ್ಲಿ ಕ್ರಮ ಸಂಖ್ಯೆ(28)ರಲ್ಲಿ ಸೇರಿಸಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಪಡೆ ಕರ್ತವ್ಯಗಳಲ್ಲಿ ಕ್ರಮ ಸಂಖ್ಯೆ(28)ರ ನಂತರ (29)ನ್ನು ಸೇರ್ಪಡೆಗೊಳಿಸಿ ಆದೇಶಿಸಿದೆ.

**"(29) ಆರೋಗ್ಯ ಇಲಾಖೆಯು ಶಿಕ್ಷಣ ಇಲಾಖೆಯ ಮುಖಾಂತರ ಶುಚಿ ಕಾರ್ಯಕ್ರಮದಡಿಯಲ್ಲಿ ಒದಗಿಸುತ್ತಿರುವ ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಗೂ ಮಧ್ಯಾಹ್ನದ ಬಿಸಿ ಊಟದ ರೇಶನ್‌ನ್ನು ಮನೆಗಳಿಗೆ ವಿತರಿಸುವುದರ ಜೊತೆಯಲ್ಲಿ ಸಂಬಂಧಿಸಿದ ವಿದ್ಯಾರ್ಥಿನಿಯರ ಮನೆಗಳಿಗೆ ವಿತರಿಸುವುದು".**

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

(ಎಸ್.ಆರ್.ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

Scanned with CamScanner